# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ.ಎಂ. ಸತೀಶ್, ಶ್ರೀ ಶಶೀಲ್ ಜಿ.ನಮೋಶಿ, ಶ್ರೀ ಆಯನೂರು ಮಂಜುನಾಥ್, ಶ್ರೀ ಎಸ್.ವಿ.ಸಂಕನೂರ ಹಾಗೂ ಶ್ರೀ ಪ್ರದೀಪ್ ಶೆಟ್ಟರ್ ಇವರುಗಳು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ನಿಯಮ 72ರಡಿ ಗಮನ ಸೆಳೆಯುವ ಸೂಚನೆಗೆ ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರ ಹೇಳಿಕೆ :-**

**ಸೂಚನೆ:** -ರಾಜ್ಯದ ಭಕ್ತ ಯಾತ್ರಾರ್ಥಿಗಳು ಚಾರ್‌ಧಾಮ್ ಯಾತ್ರೆಯನ್ನು ಕೈಗೊಂಡು ಬಂದಲ್ಲಿ ಮುಜರಾಯಿ ಇಲಾಖೆಯ ವತಿಯಿಂದ ಆರ್ಥಿಕ ಸಹಾಯಧನ ಮಂಜೂರು ಮಾಡುತ್ತಿರುವುದು ಸರಿಯಷ್ಟೇ, 2014-15ರ ಬಜೆಟ್‌ನಲ್ಲಿ ಘೋಷಿಸಿದಂತೆ ಈ ಆದೇಶ ಜಾರಿಗೆ ಬಂದಿರುತ್ತದೆ. 2019ರಲ್ಲಿ ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು ಹಲವಾರು ಭಕ್ತ ಮಹಾಶಯರಿಗೆ ಇದರಿಂದ ಸಾಕಷ್ಟು ಅನುಕೂಲವಾಗಿರುತ್ತದೆ. ತದನಂತರ 2020 ಮತ್ತು 2021 ರಲ್ಲಿ ಕರೋನ ಸೋಂಕು ಉಲ್ಬಣಗೊಂಡಿದ್ದರಿಂದ ಯಾತ್ರೆ ರದ್ದುಗೊಂಡು ಸಹಾಯ ಧನವನ್ನು ನೀಡದೆ ಹಣವು ಸಹ 2 ವರ್ಷದ್ದು ಬಾಕಿ ಉಳಿದಿರುತ್ತದೆ. ಆದರೆ, ಕರೋನ ತರುವಾಯ 2022ರಲ್ಲಿ ಅತೀ ಹೆಚ್ಚು ಭಕ್ತ ಯಾತ್ರಾರ್ಥಿಗಳು ಚಾರ್ ಧಾಮ್ ಪ್ರವಾಸ ಮಾಡಿ ಬಂದಿದ್ದರಿಂದ 2 ವರ್ಷದ ಜನರು ಒಟ್ಟು ಸೇರಿ ಭಕ್ತರ ಸಂಖ್ಯೆಯು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿರುತ್ತದೆ. ಈಗ ಸಹಾಯಧನಕ್ಕೆ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಕರೆದು 15 ದಿನ ಕಳೆದರೂ ಆನ್ ಲೈನ್ ಪ್ರಕ್ರಿಯೆಗಳು ಪೂರ್ಣ ಪ್ರಮಾಣದಲ್ಲಿ ಸಕ್ರಿಯೆಗೊಂಡಿಲ್ಲ. ಅರ್ಜಿ ಸಲ್ಲಿಸಲು ಇದೇ ತಿಂಗಳ 30 ಕಡೇ ದಿನಾಂಕವಾಗಿದ್ದು, ನೇರ ಅರ್ಜಿ ಸಲ್ಲಿಸಲು ಯಾತ್ರಿಗಳು ಅರ್ಜಿ ಪಡೆಯುವಾಗ ಪ್ರವಾಸ ಮುಗಿಸಿ ಬಂದ ಬಗ್ಗೆ ಟ್ರಾಕಿಂಗ್ ರೆಕಾರ್ಡ ಕೇಳುತ್ತಿದ್ದಾರೆ. ಇದು ಈ ವರ್ಷದ ಯಾತ್ರೆಯ ಭಕ್ತ ಜನ ಜಂಗುಳಿಯಲ್ಲಿ ತಾಂತ್ರಿಕ ತೊಂದರೆ ಉಂಟಾಗಿ, ಸರ್ವರ್ ಸ್ಕ್ಯಾನ್ ಪಡೆಯದೆ ಪರ್ಸಿ ಪ್ರಮಾಣ ಪತ್ರಗಳು ಡೌನ್ ಲೋಡ್ ಆಗುತ್ತಿಲ್ಲ. ಇದರಿಂದ ಈ ಪ್ರಮಾಣ ಪತ್ರವು ಕೆಲ ಭಕ್ತಾಧಿ ಯಾತ್ರಿಗಳಿಗೆ ಲಭ್ಯವಾಗುತ್ತಿಲ್ಲವೆಂದು ತಿಳಿದು ಬಂದಿದೆ. ಆದ್ದರಿಂದ ಅವರು ಪ್ರಯಾಣಿಸಿದ ಪ್ರಯಾಣ ಟಿಕೆಟ್ ಹಾಗೂ ಯಾತ್ರೆಗೆ ತೆರಳುವ ಮುನ್ನ ನೋಂದಣಿ ಮಾಡಿಸಿದ್ದ ಆನ್‌ಲೈನ್ ರಿಜಿಸ್ಟ್ರೇಷನ್ ಪ್ರತಿ, ಹೆಲಿಕ್ಯಾಪ್ಟರ್ ಸರ್ವೀಸ್‌ನ ಟಿಕೆಟ್, ಇತ್ಯಾಧಿಗಳ ಆಧಾರದ ಮೇಲೆಯೇ ಧನ ಸಹಾಯಕ್ಕೆ ಅರ್ಜಿ ಪರಿಗಣಿಸುವಂತೆ ಮಾನದಂಡದಲ್ಲಿ ಕೆಲವೊಂದು ತಿದ್ದುಪಡಿ/ಪರಿಷ್ಕರಣಾ ಮಾರ್ಗಸೂಚಿ ಪ್ರಕಟಿಸಬೇಕಾಗಿದೆ. ಅಲ್ಲದೇ ಪುನಃ ಕಡೇ ದಿನಾಂಕವನ್ನು ವಿಸ್ತರಿಸುವ ಅಗತ್ಯವಿದ್ದು, ಈ ಬಗ್ಗೆ ಸರ್ಕಾರದ ಕ್ರಮಗಳೇನು ಎಂಬುದನ್ನು ಪ್ರಸ್ತಾಪಿಸಲು ಮಾನ್ಯ ಮುಜರಾಯಿ ಸಚಿವರ ಮೂಲಕ ಸರ್ಕಾರದ ಗಮನವನ್ನು ಸೆಳೆಯ ಬಯಸುವೆ.

* * * * * *

**ಉತ್ತರ:-** ಕರ್ನಾಟಕ ರಾಜ್ಯದ ವತಿಯಿಂದ ಚಾರ್ ಧಾಮ್ (ಬದರಿನಾಥ್, ಕೇದಾರ್‌ನಾಥ್, ಗಂಗೋತ್ರಿ ಹಾಗೂ ಯಮುನೋತ್ರಿ) ಯಾತ್ರೆಯನ್ನು ಕೈಗೊಳ್ಳುವ ಯಾತ್ರಾರ್ಥಿಗಳಿಗೆ ತಲಾ ರೂ.20,000/- (ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ಧನ ಸಹಾಯ ನೀಡುವ ದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ: ಕಂಇ 179 ಮುಅಬಿ 2014 ದಿನಾಂಕ:07.11.2014ರನ್ವಯ **"ಚಾರ್‌ಧಾಮ್"** ಯೋಜನೆಯನ್ನು ರೂಪಿಸಿ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ಕಂಇ 11 ಮುಅಬಿ 2019 ದಿನಾಂಕ:15.10.2019ರನ್ವಯ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

......2

ಸದರಿ ಸರ್ಕಾರದ ಆದೇಶಗಳಂತೆ, 2018-19 ಹಾಗೂ 2019-20ನೇ ಸಾಲಿನಲ್ಲಿ ಚಾರ್ ಧಾಮ್ ಯಾತ್ರೆ ಕೈಗೊಂಡ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಧನ ಸಹಾಯವನ್ನು ವಿತರಿಸಲಾಗಿರುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವರ್ಷ | ಫಲಾನುಭವಿಗಳ ಸಂಖ್ಯೆ | ವಿತರಿಸಿದ ಒಟ್ಟು ಮೊತ್ತ |
|---|---|---|---|
| 1. | 2018-19 | 1730 | 346.00 |
| 2. | 2019-20 | 3044 | 608.80 |

2020-21 ಮತ್ತು 2021-22ನೇ ಸಾಲಿನಲ್ಲಿ ಕೋವಿಡ್ 19ರ ಸೋಂಕು ಹಿನ್ನೆಲೆಯಲ್ಲಿ, ಚಾರ್‌ಧಾಮ್ ಯಾತ್ರೆಯನ್ನು ಉತ್ತರಾಖಾಂಡ ಸರ್ಕಾರವು ರದ್ದುಗೊಳಿಸಿದ್ದರಿಂದ, ಈ ಸಾಲಿನಲ್ಲಿ ಅನುದಾನ ವಿತರಿಸಿರುವುದಿಲ್ಲ.

2022-23ನೇ ಸಾಲಿನಲ್ಲಿ ಉತ್ತರಾಖಾಂಡ ಸರ್ಕಾರವು ಚಾರ್‌ಧಾಮ್ ಯಾತ್ರೆಗೆ ಅನುಮತಿ ನೀಡಿದ್ದು, ಈ ಸಾಲಿನಲ್ಲಿ ಚಾರ್‌ಧಾಮ್ ಯಾತ್ರೆ ಕೈಗೊಂಡ ಕರ್ನಾಟಕದ ಯಾತ್ರಾರ್ಥಿಗಳಿಗೆ ಸಹಾಯಧನವನ್ನು ವಿತರಿಸುವ ಸಲುವಾಗಿ ಈ ಕಛೇರಿಯ ಪ್ರಕಟಣೆ ಸಂಖ್ಯೆ: ಚಾರ್‌ಧಾಮ್ ಮಾನಸಸರೋವರ/ಸಿಆರ್01/2021-22 ದಿನಾಂಕ:23.11.2022ರನ್ವಯ ಅರ್ಜಿಗಳನ್ನು ದಿನಾಂಕ:01.12.2022ರಿಂದ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ದಿನಾಂಕ:31.12.2022 ಕೊನೆಯ ದಿನವಾಗಿರುತ್ತದೆ. ಅರ್ಜಿ ಸಲ್ಲಿಸುವ ಯಾತ್ರಾರ್ಥಿಗಳು ಆನ್‌ಲೈನ್ ಅಥವಾ ಮುದ್ದಾಂ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಮುದ್ದಾಂ ಅರ್ಜಿಗಳನ್ನು ಈ ಕಛೇರಿಯಲ್ಲಿ ಸ್ವೀಕರಿಸಲಾಗುತ್ತಿದೆ. ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಧನಸಹಾಯ ಮೊತ್ತವು ನೇರವಾಗಿ ಪಾವತಿಯಾಗುವ ಉದ್ದೇಶದಿಂದ ಅರ್ಜಿಯೊಂದಿಗೆ ಸಲ್ಲಿಸುವ ದಾಖಲೆಗಳೊಂದಿಗೆ ಆಧಾರ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ. ಸರ್ಕಾರದ ಇತ್ತೀಚಿನ ಆದೇಶದಂತೆ ಆಧಾರ್ ಅನ್ನು ಪಡೆಯಲು ಸರ್ಕಾರದ ಅನುಮತಿ ಅಗತ್ಯವಿದ್ದು, ಸರ್ಕಾರದ ಅನುಮತಿ ಪಡೆಯಲಾಗಿರುತ್ತದೆ. ಇದನ್ನು ಅನುಸರಿಸಿ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ತಾಂತ್ರಿಕ ಪ್ರಕ್ರಿಯೆಯು ಚಾಲನೆಯಲ್ಲಿದ್ದು, ಸದ್ಯದಲ್ಲಿಯೇ (ವಾರಾಂತ್ಯದೊಳಗೆ) ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವ ಪ್ರಕ್ರಿಯೆಗಳನ್ನು ಸಕ್ರಿಯಗೊಳಿಸಲಾಗುವುದು. ಪ್ರತಿ ವರ್ಷವೂ ಸಹಾ ಸ್ವೀಕೃತವಾಗುವ ಅರ್ಜಿಗಳ ಸಂಖ್ಯೆ ನಿಗದಿಪಡಿಸಲಾದ ಫಲಾನುಭವಿಗಳ ಸಂಖ್ಯೆಗಿಂತ ಹೆಚ್ಚು ಸ್ವೀಕೃತವಾಗುತ್ತಿದ್ದು, ಅರ್ಹ ಫಲಾನುಭವಿಗಳನ್ನು ಸರ್ಕಾರದ ಮಾರ್ಗಸೂಚಿಯನ್ವಯ ಅನುದಾನದ ಲಭ್ಯತೆಯ ಆಧಾರಕ್ಕೆ ಅನುಗುಣವಾಗಿ ಲಾಟರಿ ಮೂಲಕ ಆಯ್ಕೆ ಮಾಡಲಾಗುತ್ತಿದೆ. ಆದ್ದರಿಂದ ಅಗತ್ಯತೆ ಕಂಡು ಬಂದಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಯಾತ್ರಾರ್ಥಿಗಳ ಹಿತದೃಷ್ಟಿಯಿಂದ ವಿಸ್ತರಿಸಲಾಗುವುದು.

......3

ಯಾತ್ರೆ ಮುಗಿದ ನಂತರ ಉತ್ತರಾಖಂಡ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ನೀಡಲಾದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸಬೇಕಾಗಿರುತ್ತದೆ. ಆದರೆ ತಾಂತ್ರಿಕ ಕಾರಣಗಳಿಂದಾಗಿ ಸದರಿ ಪ್ರಮಾಣ ಪತ್ರವನ್ನು ಪಡೆಯಲು ಸಾಧ್ಯವಾಗುತ್ತಿಲ್ಲವೆಂಬ ಅಂಶವನ್ನು ಕೆಲವು ಯಾತ್ರಾರ್ಥಿಗಳು ಈ ಕಛೇರಿಯ ಗಮನಕ್ಕೆ ತಂದಿದ್ದು, ಇದನ್ನು ಗಮನಿಸಿ ಯಾತ್ರಾರ್ಥಿಗಳ ಹಿತದೃಷ್ಟಿಯಿಂದ ಚಾರ್ ಧಾಮ್ ಯಾತ್ರೆ ಕೈಗೊಂಡ ಬಗ್ಗೆ ಖಾತ್ರಿ ಪಡಿಸುವ ಇತರೇ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಸರ್ಕಾರದ ಧನಸಹಾಯ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಕಂಇ 255 ಮುಸಪ್ರ 2022

(ಶಶಿಕಲಾ. ಅ. ಜೊಲ್ಲೆ)
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು